# ನಾಯಿ ಪೇಂಟಿಂಗ್ಸ್!

ಮನುಷ್ಯರು ಮಾತ್ರ ಕಲಾವಿದರಾದರೆ ಸಾಕೆ... ನಾನೂ ಆಗುತ್ತೇನೆ' ಎನ್ನುತ್ತಿದೆ ಈ ಶ್ವಾನ!

ಕ್ಯಾಲಿಫೋರ್ನಿಯಾದ ಈ ನಾಯಿ ಈಗಾಗಲೆ ತನ್ನ ಚಿತ್ರಗಳ ಮೂಲಕ ಕಲಾಪ್ರಪಂಚದಲ್ಲಿ ಎಲ್ಲರೂ ನಿಬ್ಬೆರಗಾಗುವಂತೆ ಮಾಡಿದೆ.

ಪೆಕನೀಸ್ ಎನ್ನುವ ಗಿಡ್ಡ ತಳಿಯ ಜಿಗ್ಗಿ ಎಂಬ ಹೆಸರಿನ ಈ ನಾಯಿ ನಿಪುಣ ಪೇಂಟರ್ ತರಹ ಕ್ಯಾನ್ವಾಸ್ ಮೇಲೆ ಅನೇಕ ಅಮೂರ್ತ ಕಲಾಕೃತಿಗಳನ್ನು ರಚಿಸಿದೆ. ಇದರ ಹೆಮ್ಮೆಯ ಒಡತಿ ಎಲಿಜಿಬೆತ್ ಪ್ರಕಾರ, ಪೇಂಟಿಂಗ್ ಅನ್ನುವುದು ಜಿಗ್ಗಿಯ ಹವ್ಯಾಸ. ತನ್ನ ಹಲ್ಲುಗಳ ನಡುವೆ ಬ್ರಷ್ ಅನ್ನು ಕಚ್ಚಿ ಹಿಡಿಯುವಷ್ಟು ದೊಡ್ಡದಾದ ಮೇಲೆ ಇದು ತನ್ನ ಪೇಟಿಂಗ್ ಅನ್ನು ಪ್ರಾರಂಭಿಸಿತಂತೆ. ಕಲೆಯ ಬಗ್ಗೆ ಅಸಕ್ತಿ ತೋರಿದ ನಾಯಿಗೆ ಬ್ರಷ್ ಉಪಯೋಗಿಸಲು ಅನುಕೂಲವಾಗುವಂತೆ ಕಾಗದದ ಸುರುಳಿಯ ನಡುವೆ ಬ್ರಷ್ ಸಿಕ್ಕಿಸಿ ಕೊಟ್ಟು ಆಕೆ ಪ್ರೋತ್ಸಾಹಿಸಿದಳಂತೆ.

ಅನೇಕ ಕಲಾವಿದರಂತೆ ಜಿಗ್ಗಿಯೂ ಬಹಳ ಮೂಡಿಯೇ. ತನಗೆ ಮನಸ್ಸಿಗೆ ಬಂದರೆ ಮಾತ್ರ ಅದು ಕುಂಚವನ್ನು ಹಿಡಿಯುತ್ತದೆ! ಒಂದೆರಡು ನಿಮಿಷಗಳ ಪೇಂಟಿಂಗ್ ಸೆಷನ್ ಆದ ಮೇಲೆ ಚುಟುಕು ನಿದ್ದೆಗಾಗಿಯೋ, ಕುರುಕು ತಿನಿಸಿಗಾಗಿಯೋ 'ಬ್ರೇಕ್' ತೆಗೆದುಕೊಳ್ಳುವುದರಿಂದ ಒಂದೊಂದು ಪೇಂಟಿಂಗ್ ಮುಗಿಸಲು ಜಿಗ್ಗಿಗೆ ಕೆಲವಾರು ದಿನಗಳು ಅಥವಾ ವಾರಗಳೇ ಬೇಕಾಗುತ್ತದೆಯಂತೆ.

ಅಂದ ಹಾಗೆ, ಈ ಕಲಾವಿದ ನಾಯಿಯ ಕಲಾಕೃತಿಯೊಂದನ್ನು ಪಕ್ಕದ ಮನೆಯವರು 250 ಡಾಲರ್ ನೀಡಿ ಖರೀದಿಸಿದ್ದಾರಂತೆ.

■ ವಿದ್ಯಾ ಹಾಲಭಾವಿ



